ಕಡೆಯವರಲ್ಲಿ ಒಂದು ರೀತಿಯ ನೈತಿಕ ಧೈರ್ಯ ಮತ್ತು ವಿಶ್ವಾಸ ಇರುತ್ತವೆ. ರೋಗಿಗೆ ಯಾವ ಯಾವ ಔಷಧಿಗಳನ್ನು ಕೊಡಲಾಗುತ್ತದೆಂಬ ಅರಿವು ರೋಗಿಯ ಕಡೆಯವರಲ್ಲಿ ಇರುತ್ತದೆ. ಈ ವಿಷಯವನ್ನು ಯಾಕೆ ಎಲ್ಲರೂ ಯೋಚಿಸಬಾರದು ಎಂದುಕೊಂಡು ಆಗಲೇ ನನ್ನೊಂದಿಗೆ ಪಕ್ಕದಲ್ಲಿ ಕುಳಿತು ಮಾತನಾಡಿದ ಮೇಡಮ್‌ನವರನ್ನು ಹುಡುಕಾಡಿದೆ. ಆಕೆ ಅಟೆಂಡರ್ಸ್ ಲಾಂಜ್‌ನಲ್ಲಿ ಎಲ್ಲೂ ಕಂಡು ಬರಲಿಲ್ಲ. ಅಲ್ಲಿ ಕುಳಿತು ಮೊಬೈಲ್ನಲ್ಲಿ ಮುಳುಗಿದ್ದ ಯುವಕನನ್ನು ಆ ಬಗ್ಗೆ ವಿಚಾರಿಸಿದೆ. ಆತ ನಕ್ಕು, 'ಅವರು ಹೋಗಿ ಹದಿನೈದು ನಿಮಿಷಗಳಾದವು. ನಾನು ಒಂದೂವರೆ ತಿಂಗಳಿಂದಲೂ ನನ್ನ ತಾತನನ್ನು ಕಾಯುತ್ತಾ ಈ ಅಟೆಂಡರ್ಸ್ ಲಾಂಜ್‌ನಲ್ಲಿ ಕಾಲ ಕಳೆಯುತ್ತಿದ್ದೇನೆ. ನಮ್ಮ ತಾತನಿಗೆ ಎಂಬತ್ತೆರಡು ವರ್ಷ. ವೈಟ್ ಫೀಲ್ಡ್ ನಲ್ಲಿ ನಮ್ಮ ತಾತನ ಹೆಸರಲ್ಲಿ ಮುವತ್ತೆರಡು ಎಕರೆ ಜಮೀನು ಇದೆ. ಸದ್ಯಕ್ಕೆ ನಂಬರ್ ಒನ್ ಲ್ಯಾಂಡ್ ಲಾರ್ಡ್. ಮಕ್ಕಳು, ಮೊಮ್ಮಕ್ಕಳು ಸೇರಿ ಇಪ್ಪತ್ತೈದು ಜನ ಇದ್ದೇವೆ. ಹೆಣ್ಣು ಮಕ್ಕಳು ಆಸ್ತಿಗಾಗಿ ಕೋರ್ಟ್ ಮೆಟ್ಟಿಲು ಏರಿದ್ದಾರೆ. ನಮ್ಮ ತಾತ ರಿಕವರಿಯಾಗಿದ್ದರೂ ಮನೆಯಲ್ಲಿ ಇರುವುದಕ್ಕಿಂತ ಆಸ್ಪತ್ರೆಯಲ್ಲಿ ಇದ್ದರೇನೇ ಒಳ್ಳೆಯದೆಂದು ಲಾಯರ್ ಹೇಳಿರುವುದರಿಂದ ಇಲ್ಲಿ ಐಸಿಯುವಿನಲ್ಲೇ ಇರಿಸಿದ್ದೇವೆ. ನಮ್ಮ ತಾತ ಹೆಣ್ಣು ಮಕ್ಕಳಿಗೆ ಹೆಚ್ಚಿನ ಪಾಲು ಕೊಡಬಹುದೆಂದು ಗಂಡು ಮಕ್ಕಳಿಗೆ ವಿಪರೀತ ಆತಂಕ. ದಿನ ಅರವತ್ತು ಸಾವಿರ ಬಿಲ್ ಆಗುತ್ತಿದೆ. ಈ ವಾರದಲ್ಲಿ ಕೇಸ್ ಇತ್ಯಾರ್ಥವಾಗುತ್ತದೆಂದು ಲಾಯರ್ ಹೇಳಿದ್ದಾರೆ. ಮೋಸ್ಟ್ಲಿ ಮುಂದಿನ ವಾರ ಕಳೆದ ಮೇಲೆ ಡಿಸ್ಚಾರ್ಜ್ ಮಾಡಿಸುತ್ತೇವೆ. ನಮ್ಮ ದೊಡ್ಡಪ್ಪ ಚಿರಂಜೀವಿಯ ಕ್ಲೋಸ್ ಫ್ರೆಂಡ್. ಈ ನರ್ಸಿಂಗ್ ಹೋಂ ಕೂಡಾ ಚಿರಂಜೀವಿಯ ಸೊಸೆಯದಂತೆ. ನನ್ನದು ಎಂಬಿಬಿಎಸ್ ಡಿಸ್ಟಿಂಕ್ಷನ್ ನಲ್ಲಿ ಪಾಸಾಗಿದೆ. ಮುಂದಿನ ವರ್ಷ ಜನರಲ್ ಮೆಡಿಸಿನ್ ಎಂಡಿ ಗೆ ಸೇರಬೇಕು. ನಮ್ಮ ತಾತನನ್ನು ನೋಡಿಕೊಳ್ಳಲು ನಾನೇ ಸರಿ ಅಂತ ನಮ್ಮ ಮನೆಯವರು ನನ್ನನ್ನಿಲ್ಲಿ ಇರಿಸಿದ್ದಾರೆ. ನಾನು ಪಕ್ಕದ ಹೋಟೆಲ್ ನಲ್ಲೇ ರೂಂ ಮಾಡಿಕೊಂಡಿದ್ದೇನೆ. ಬೈ ದಿ ಬೈ ಅರ್ಧ ಗಂಟೆಯ ಹಿಂದೆ ನಿಮ್ಮ ಪಕ್ಕದಲ್ಲಿ ಕುಳಿತು ಮಾತನಾಡಿದ ಮೇಡಮ್‌ನವರ ಗಂಡ ಈ



ಆಸ್ಪತ್ರೆಯಲ್ಲಿ ಸತ್ತು ಹದಿನೆಂಟು ದಿನಗಳಾದವು. ಅವರ ಮಕ್ಕಳಿಬ್ಬರು ಫಾರಿನ್‌ನಲ್ಲಿ ಇದ್ದಾರಂತೆ. ಅದೇನೋ ಸಮಸ್ಯೆಯಿಂದಾಗಿ ಅವರು ಬರಲು ಸಾಧ್ಯವಾಗಿರಲಿಲ್ಲ. ಗಂಡನ ಡೆಡ್ ಬಾಡಿಯನ್ನು ಬೌರಿಂಗ್ ಆಸ್ಪತ್ರೆಗೆ ಡೊನೇಟ್ ಮಾಡಿದರು. ಇಂದು ಮಕ್ಕಳೊಂದಿಗೆ ಅವರು ಫಾರಿನ್‌ಗೆ ಹೊರಟಿದ್ದಾರೆ. ಕಡೆಯದಾಗಿ ಬಂದು ಗಂಟೆ ಕಾಲ ತಮ್ಮ ಗಂಡನ ನೆನಪಿಗಾಗಿ ಅಟೆಂಡರ್ಸ್ ಲಾಂಜ್‌ನಲ್ಲಿ ಕುಳಿತು ಹೋದರು. ಅವರು ಇಲ್ಲಿರುವವರೆಗೂ ಆಸ್ಪತ್ರೆಗೆ ಬಂದವರಿಗೆಲ್ಲರಿಗೂ ಸಮಾಧಾನ ಹೇಳುತ್ತಿದ್ದರು. ಲಿಟರೇಚರ್ ಏನೋ ಓದಿರುವುದಾಗಿ ಹೇಳಿದ ನೆನಪು...' ಅಗತ್ಯಕ್ಕಿಂತಲೂ ಆ ಯುವಕ ಮಾತನಾಡಿದ್ದರೂ ನನಗ್ಯಾಕೊ ಆತ ಹೇಳಿದ ಎಲ್ಲ ಸಂಗತಿಗಳೂ ಅನಗತ್ಯವೆನಿಸಿರಲಿಲ್ಲ.

ಅಕೌಂಟ್ಸ್ ಡಿಪಾರ್ಟ್ಮೆಂಟ್‌ನಿಂದ ಫೋನ್ ಬಂದಿತ್ತು. ಆ ಕಡೆಗೆ ಹೋದಾಗ ಅಕೌಂಟ್ಸ್ ಆಫೀಸರ್ ಮೇಡಮ್ ಒಬ್ಬರೇ ಕುಳಿತಿದ್ದರು. ನಗುತ್ತಾ ಕುಳಿತುಕೊಳ್ಳಲು ಹೇಳಿ ಕಂಪ್ಯೂಟರ್ ನಲ್ಲಿ ಕಣ್ಣು ಮತ್ತು ಬೆರಳು ಎರಡನ್ನೂ ಆಡಿಸಿ 'ಮೊನ್ನೆಗೆ ನೀವು ಡಿಪಾಸಿಟ್

